# ದೇವರ ಕೋಣ

ದೇವರು–ನಡೆದಾಡುವ ದೇವತೆಗಳ ಚರ್ಚೆ ಒಂದು ಕಾಲಕ್ಕೆ ನಡೆದು ನಿಂತು ಹೋಗುವ ಸಂಗತಿಯೇನಲ್ಲ. ಹಾಗೆಯೇ ಮುಕ್ತ ಚರ್ಚೆಗಳಾಗಿಯೂ ಉಳಿದಿಲ್ಲ. 'ಕೋಳಿ ಮೊದಲೋ ಮೊಟ್ಟೆ ಮೊದಲೋ' ಎನ್ನುವ ಚರ್ಚೆಯಂತೆ 'ಮಾನವ ಮೊದಲೋ ದೇವರು ಮೊದಲೋ' ಎನ್ನುವ ಚರ್ಚೆಯೂ ತಳುಕು ಹಾಕಿಕೊಂಡಿದೆ. ನಿರ್ವಾತದಿಂದ ಲೋಕ ಸೃಷ್ಟಿಗೊಂಡಿಲ್ಲ, ದೇವಕಣಗಳು ಈ ಮೊದಲೇ ಸೃಷ್ಟಿಗೊಂಡಿದ್ದವು ಎಂಬ ಚರ್ಚೆಯೂ ಜೀವಂತವಾಗಿದೆ.

ಈ ಚರ್ಚೆಗಳೇನೆ ಇರಲಿ ಪಾಪ ಪುಣ್ಯಗಳೆಂಬ ನೈತಿಕ ಮೌಲ್ಯಗಳಿಗೆ ತನ್ನನ್ನು ಬಂಧಿಸಿಕೊಂಡ ಮನುಷ್ಯನಿಗೆ ನಡಾವಳಿಗಳನ್ನು ರೂಪಿಸುವ ಸಾಧ್ಯತೆಯಾಗಿ ದೇವರು ಮನುಷ್ಯನಿಂದ ರೂಪಿಸಲ್ಪಟ್ಟ. ತನ್ನ ಕಲ್ಪನೆ ಎಷ್ಟೆಷ್ಟು ಸುಂದರವೋ ಅಷ್ಟಷ್ಟು ಸುಂದರವಾದ ದೈವಗಳನ್ನು ರೂಪಿಸಿಕೊಂಡ. ಆಹಾರ ಪದ್ಧತಿಗಳಿಗೆ ಅನುಗುಣವಾಗಿ ದೇವರು–ಪ್ರಸಾದಗಳು ನಿರ್ಧರಿಸಲ್ಪಟ್ಟವು. ಪೂಜೆ, ಆರಾಧನೆ, ಜಾತ್ರೆ ಇವೆಲ್ಲವೂ ಮನುಷ್ಯ ದೇವರ ಸುತ್ತ ರೂಪಿಸಿದ ಆಚರಣೆಗಳು.

ಆಯಾ ಕಾಲದ ನಂಬಿಕೆ, ಜನಜೀವನದ ಒತ್ತಡಗಳಿಂದ ದೇವರುಗಳು ಹುಟ್ಟಿಕೊಂಡರು. ಬುದ್ಧನಾಗಲಿ, ಏಸುವಾಗಲಿ, ಮಹಮದ್ ಆಗಲಿ, ಮಾನವನ ಸಂಕಷ್ಟಕ್ಕೆ ಮೋಕ್ಷ ಕೊಡುವ ಸಾಧ್ಯತೆಗಳಾಗಿಯೇ ಹುಟ್ಟಿಕೊಂಡರು.

ಗಾಂಧಿ, ನೆಲ್ಸನ್ ಮಂಡೇಲಾ, ಅಂಬೇಡ್ಕರ್, ಬಸವ ಮೊದಲಾದವರು ಮಾನವ ನಿರ್ಮಿತ ಸಂಕೋಲೆಗಳಲ್ಲಿ ಬಂಧಿತರಾದವರ ಬಿಡುಗಡೆಗಾಗಿ ತಮ್ಮನ್ನು ತೆತ್ತುಕೊಂಡವರು. ವಿಪರ್ಯಾಸವೆಂದರೆ ಒಂದು ಕಡೆ ಬಂಧಿತರ ವಿಮೋಚನೆಗೆ ಹೋರಾಟ ನಡೆದರೆ ಇನ್ನೊಂದು ಕಡೆ ತಾವೇ ಬಂಧಿತರಾಗ ಹೊರಟವೂ ನಡೆದಿರುತ್ತದೆ.

ಇತ್ತೀಚೆಗೆ 'ಪ್ರಜಾವಾಣಿ'ಯಲ್ಲಿ ದೇವರ ಕೋಣದ ಸುತ್ತ ನಡೆದ ಒಂದು ಸುದ್ದಿ ಪ್ರಕಟವಾಯಿತು. ಅದರ ಸಾರ ಇಷ್ಟು: ಒಂದೂರಿನಲ್ಲಿ ಮರಿಕೋಣ ಪ್ರತ್ಯಕ್ಷವಾಗುತ್ತದೆ. ಆ ಮರಿಯನ್ನು ಆ ಊರಿನವರು ದೇವರ ಕೋಣವನ್ನಾಗಿಸುತ್ತಾರೆ. ದೇವರ ಕೋಣವೆಂದರೆ ಮಾರಿಗೆ ಬಿಟ್ಟ ಬಲಿಯೇ. ಲೌಕಿಕವಾಗಿ ಗಂಡ ಹೆಂಡತಿಯನ್ನು ಆಕ್ರಮಿಸುತ್ತಿರುತ್ತಾನೆ. ಮಾನಸಿಕವಾಗಿ ದೈಹಿಕವಾಗಿ ಹತ್ತಿಕ್ಕುತ್ತಿರುತ್ತಾನೆ. ಮಾರಿ, ತನ್ನ ಗಂಡನಾದ ಕೋಣನನ್ನು ಬಲಿ ತೆಗೆದುಕೊಳ್ಳುವ ಸಂಪ್ರದಾಯದ ಹಿಂದಿನ ಕತೆಗೂ ಲೌಕಿಕದ ಹೆಣ್ಣು ಗಂಡಿನ ಒಡನಾಟಕ್ಕೂ ಸಂಬಂಧಗಳಿವೆ.

ವಾರಸುದಾರರಿಲ್ಲದವರಿಗೆ ಹಲವು ವಾರಸುದಾರರು ಹುಟ್ಟಿಕೊಳ್ಳುವಂತೆ ಈ ಕೋಣಕ್ಕೂ ವಾರಸುದಾರರು ಹುಟ್ಟಿಕೊಳ್ಳುತ್ತಾರೆ. ಅವರ ನಡುವೆ ಜಗಳ ಆರಂಭವಾಗುತ್ತದೆ. ಪ್ರಕರಣ ಪೊಲೀಸ್ ಠಾಣೆ ಪ್ರವೇಶಿಸುತ್ತದೆ. ಅಸಹಾಯಕವಾದ ಠಾಣೆಗೆ ಪ್ರಕರಣ ಬಗೆಹರಿಸುವುದು ಕಗ್ಗಂಟಾಯಿತು. ಅನಾಥವಾಗಿ ಊರೊಂದನ್ನು ಪ್ರವೇಶಿಸಿದ್ದ ಮರಿಕೋಣ ಯಾವ ಊರಿಗೆ, ಯಾವ ದೇವರಿಗೆ ಸೇರಬೇಕೆಂಬ ತೀರ್ಮಾನ ಕಾಯ್ದಿರಿಸಲಾಯಿತು.

ಮಾಸ್ತಿಯವರ ಪ್ರಸಿದ್ಧ ಕತೆ 'ಕಲ್ಮಾಡಿಯ ಕೋಣ'. ಕಲ್ಮಾಡಿಯಲ್ಲಿ ಭಯಾನಕ ದೇವತೆಯೆಂದರೆ ಮಾರಿ. ಉಳಿದೆಲ್ಲ ಮಾರಿಗಳಿಗಿಂತ ಅತ್ಯಂತ ಭೀಕರವಾದ ಮಾರಿ ಆಕೆ. ಆದ್ದರಿಂದ ಆ ಊರಿಗೆ ಕಲ್ಲು ಮಾರಿ, ಕಲ್ಮಾಡಿ ಎಂಬ ಹೆಸರು ಬಂದಿರಬಹುದೆಂದು ಲೇಖಕರು ಊಹಿಸುತ್ತಾರೆ. ಕತೆಗಾರರು ಗಾಡಿಯೊಂದರಲ್ಲಿ ಪಯಣಿಸುತ್ತಿದ್ದಾಗ ಕೋಣವೊಂದನ್ನು ಅಟ್ಟಿಸಿಕೊಂಡು ಹೋಗುವ ಜನಸಮೂಹವನ್ನು ನೋಡುತ್ತಾರೆ. ಓಡುತ್ತಿರುವ ಕೋಣದ ಹಿಂದೆ ಒಂದು ಕತೆಯಿದೆ. ಕಲ್ಮಾಡಿಯ ಮಾರಿಗುಡಿಗೆ ಮೂರು ಕೋಣಗಳನ್ನು ವರ್ಷಕ್ಕೊಂದರಂತೆ ತೊಂಡುಮೇಯಲು ಬಿಡುವ ಪದ್ಧತಿಯಿದೆ. ಒಂದೊಂದು ಕೋಣವೂ ಮೂರು ವರ್ಷ ತೊಂಡು ಮೇಯ್ದು ದಷ್ಟಪುಷ್ಟವಾಗುತ್ತದೆ. ಇಂತಹ ಕೋಣ ಮಾರಿಯ ಮತ್ತು ಅದನ್ನು ಪ್ರಸಾದ ರೂಪದಲ್ಲಿ ತಿನ್ನುವ ಜನರ ಬಯಕೆಯನ್ನು ತಣಿಸುತ್ತದೆ.

ದೇವರ ಹೆಸರಿನಲ್ಲಿ ಕೊಲ್ಲುತ್ತಿದ್ದವನ ಕೋಣವೊಂದನ್ನು ಆರಿಸಿ ತೊಂಡು ಮೇಯಲು ಬಿಡಲಾಗಿರುತ್ತದೆ. ದುರದೃಷ್ಟವಶಾತ್ ಸರದಿಯಂತೆ ಬಲಿಕೊಡಬೇಕಾಗಿದ್ದ ಮೊದಲನೆಯ ಕೋಣ ತೀರಿಹೋಗಿ ಎರಡನೆಯ ಕೋಣದ ಸರದಿ ಬರುತ್ತದೆ. ತನ್ನ ಕೋಣವನ್ನೇ ಬಲಿ ಕೊಡುವ ಸಂದರ್ಭ ಬಂದುಬಿಡುತ್ತದೆ. ಮುದ್ದಾಗಿ ಸಾಕಿದ್ದ ತನ್ನ ಕೋಣವನ್ನು ಕೊಲ್ಲಲಾರದೆ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ದೇವತೆಯ ವಿಷಯದಲ್ಲಿ ಯಾವುದೇ ಹೊಂದಾಣಿಕೆಯಿಲ್ಲ ಎಂಬ ಕಠಿಣವಾದ ಮಾತು ಎದುರಿಸಬೇಕಾತ್ತದೆ.

ಒಲ್ಲದ ಮನಸ್ಸಿನಿಂದ ಬಲಿ ಕೊಡಲು ಸಿದ್ಧನಾದಾಗ ಗಾಬರಿಯಿಂದ ಅದು ಮುಖ ತಿರುಗಿಸಿ ಅವನ ಮುಖ ನೋಡುತ್ತದೆ. ಆ ನೋಟ ಅವನ ಕರುಳನ್ನು ಕಲಕುತ್ತದೆ. ಆ ತನಕ ಅವನು ಕತ್ತರಿಸಿದ ಆ ಮುಗ್ಧಪ್ರಾಣಿಗಳ ನೋಟ ಅವನನ್ನು ತಲ್ಲಣಿಸುವಂತೆ ಮಾಡಿರಲಿಲ್ಲವೇ? ಇದಕ್ಕೆ ಮಾರಿಯ ಮುಂದೆ ಯಾವ ಉತ್ತರ ಸಿಗಬಲ್ಲದು. ಮಾರಿ ಜನರ ಪಾಪ ಪುಣ್ಯಗಳನ್ನು ತನ್ನ ಹೊಟ್ಟೆಗೆ ಹಾಕಿಕೊಂಡು ಅವರಿಗೆ ರೋಗ ರುಜಿನಗಳು ಬರದಂತೆ ಕಾಪಾಡುವ ಕೆಲಸಕ್ಕೆ ಪ್ರತಿಯಾಗಿ ಬಲಿಯನ್ನು ಪಡೆಯುತ್ತಿರುವುದು.

ಮುಗ್ಧ ನೋಟವನ್ನು ಕಂಡ ಅವನ ಜೀವ ತಲ್ಲಣಿಸುತ್ತದೆ. ಪರಿಣಾಮ ಅವನು ಬೀಸಿದ ಕತ್ತಿ ಗುರಿತಪ್ಪಿ ಕೊರಳನ್ನು ಸರಿಯಾಗಿ ಕತ್ತರಿಸುವುದಿಲ್ಲ. ಕೋಣ ಅಲ್ಲಿಂದ ಓಡಿ ಜೀವ ಉಳಿಸಿಕೊಳ್ಳಲು ಯತ್ನಿಸುತ್ತದೆ. ಓಡಿ, ಓಡಿ ಅದು ಆಳವಾದ ಕಮರಿಯಲ್ಲಿ ಬಿದ್ದು ನರಳುತ್ತದೆ. ಅಲ್ಲಿಯೇ ಹೋಗಿ ಬಲಿ ತೆಗೆದುಕೊಂಡು ದೇವಿಗೆ ಅರ್ಪಿಸಿ ಭಕ್ತಾದಿಗಳು ಕೃತಕೃತ್ಯರಾಗುತ್ತಾರೆ.

ಅನಂತರ ಇನ್ನೊಂದು ಮಾರಿಯ ಬಲಿ ತಲೆಯೆತ್ತುತ್ತದೆ. ಎರಡು ಮಾರಿಗಳಿಗೆ ಎರಡು ಕೋಣ ಬಲಿಯ ಪದ್ಧತಿ ಆರಂಭವಾಗುತ್ತದೆ. ಮಾಸ್ತಿ ಎತ್ತುವ ಪ್ರಶ್ನೆ ಜೀವವೊಂದು ತಾನು ಉಳಿಯಬೇಕೆಂದು ಓಟ ಕಿತ್ತಿತು. ಆದರೆ ಅದು ಉಳಿಯಿತೇ? ಜೀವದಿಂದ ಜೀವವನ್ನು ಕೊಲ್ಲಿಸುತ್ತಾ ಸಾವು ಸಾಮ್ರಾಜ್ಯ ನಡೆಸುತ್ತದೆ.

ಹರಕೆಗೆ ತಂದ ಕುರಿ ತೋರಣ ತಿಂದು ತನ್ನ ಜೀವವನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತದೆ. ಬಸವಣ್ಣ ಇಂತಹ ಅಮಾಯಕ ಪ್ರಾಣಿಗಳನ್ನು ಕೊಲ್ಲುವವರನ್ನು 'ಕೊಂದವರುಳಿದರೇ' ಎಂದು ಪ್ರಶ್ನಿಸುತ್ತಾನೆ. ಹೀಗೆ ಜೀವಪರ ನಿಲುವನ್ನು, ಜೀವಹತ್ಯೆಯ ಅನಿವಾರ್ಯ ಅಗತ್ಯವನ್ನು ಒಟ್ಟೊಟ್ಟಾಗಿ ನಮ್ಮ ಬದುಕು ಎತ್ತಿ ಹಿಡಿಯುತ್ತಲೇ ಬಂದಿದೆ. ಹಿಂಸೆ ಮತ್ತು ಅಹಿಂಸೆಗಳ ನಡುವಿನ ತರ್ಕ ನಮ್ಮಲ್ಲಿ ನಿರಂತರವಾಗಿ ನಡೆಯುತ್ತಲೇ ಇರುತ್ತದೆ.

■ **ಅಮೃತಮತಿ**

## ಮಾತೇ ಮುತ್ತು

- ಇತಿಹಾಸವೆಂಬುದು ಕೇವಲ ರಾಜ ರಾಣಿಯರ ಕಥೆಯಲ್ಲ, ಕಾಲಕಾಲಕ್ಕೆ ಬದಲಾಗುತ್ತಾ ಬಂದ ಬದುಕು. ಅದರ ಕಾಲಧರ್ಮ, ಅದರಿಂದ ಪ್ರಭಾವಿತರಾದ ಜನರ ರೀತಿ ನೀತಿಗಳು, ಆ ಸಾಮಾಜಿಕ ವ್ಯವಸ್ಥೆಯ ಪ್ರಮುಖ ಶಕ್ತಿಗಳನ್ನು ಬಿಂಬಿಸುವ ಮುಖ್ಯ ಅಂಶಗಳಾಗಿವೆ.

  —ನಿರಂಜನ

- ಕರೆ ಕಳುಹಿಸದೆ ಬರುವುದು ಎಷ್ಟು ತಪ್ಪೋ, ಕೇಳದೇ ಬುದ್ಧಿವಾದ ಹೇಳುವುದು ಅಷ್ಟೇ ತಪ್ಪು.

  —ತರಾಸು

- ಹಲವು ಹಳ್ಳಗಳು ಹರಿದು ಬಂದು ಸಮುದ್ರವಾಗುವಂತೆ, ಕೆಲವನ್ನು ತಿಳಿದವರಿಂದ ಕಲಿತು, ಕೆಲವು ಶಾಸ್ತ್ರಗಳನ್ನು ಕೇಳುತ್ತಾ, ಕೆಲವನ್ನು ಮಾಡುವವರನ್ನು ಕಂಡು, ಕೆಲವನ್ನು ಎಚ್ಚರದಿಂದ ನೋಡುತ್ತಾ, ಸಜ್ಜನರ ಸಹವಾಸದಿಂದ ಮನುಷ್ಯ ಸರ್ವಜ್ಞನಾಗುತ್ತಾನೆ.

  —ಪುಲಿಗೆರೆ ಸೋಮೇಶ್ವರ

- ಒಬ್ಬ ಮನುಷ್ಯ, ಆತನ ಸ್ನೇಹಿತರು ಹೊಗಳಿ ಹಾಡುವಷ್ಟು ಒಳ್ಳೆಯವನೂ ಇರುವುದಿಲ್ಲ. ಅವನಿಗಾಗದವರು ತೆಗಳಿ ತಿರಸ್ಕರಿಸುವಷ್ಟು ಕೆಟ್ಟವನೂ ಇರುವುದಿಲ್ಲ.

  —ಮಾಸ್ತಿ ವೆಂಕಟೇಶ ಅಯ್ಯಂಗಾರ್

- ಮನುಷ್ಯನ ಬೆಳವಣಿಗೆಗೆ ಬೇಕಾದ ಸ್ವಾರ್ಥವು ಅವನಲ್ಲಿರಬೇಕು. ಆದರೆ ಮಿತಿ ಮೀರಿದ ಸ್ವಾರ್ಥವಿರಕೂಡದು.

  —ಶಿವರಾಮ ಕಾರಂತ